ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು)

(ಶ್ರೀ ಎಸ್.ಎಂ.ಕೃಷ್ಣ ಅವರ ಪರವಾಗಿ): ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ."

ಛೇರ್ಮನ್: ಪ್ರಸ್ತಾವ ಏನೆಂದರೆ,

"2003ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ಸಭೆಯು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನಿಡಲಾಯಿತು

ಶಾಸನ ರಚನೆ

ಅ. ವಿಧೇಯಕವನ್ನು ಮಂಡಿಸುವುದು.

ii. ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 2003

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): (ಶ್ರೀ ಎಸ್.ಎಂ. ಕೃಷ್ಣ ಅವರ ಪರವಾಗಿ): ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಛೇರ್ಮನ್: ಪ್ರಸ್ತಾವ ಏನೆಂದರೆ,

"2003ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, "2003ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಛೇರ್ಮನ್: ಅನುಬಂಧ III ವಿಧೇಯಕವನ್ನು ಮಂಡಿಸಲಾಗಿದೆ.

ಆ. iii. ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕ 1996-ಭಾರತದ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದರ ಮೇರೆಗೆ ಪುನಃ ಪರ್ಯಾಲೋಚನಾ ಪ್ರಸ್ತಾವ.

ಶ್ರೀ ವಸಂತ ಎ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಗೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕವನ್ನು ಭಾರತ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದ ಮೇರೆಗೆ .....

ಸಿ.ಇ.ಟಿ. ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ: ಈಗ ಸರ್ಕಾರಕ್ಕೆ ವ್ಯಾಟ್ ವಿಧೇಯಕ ಮಾಡಬೇಕೆಂದಿತ್ತು, ಅದು ಆಯಿತು. ನಮಗೆ ಬರಗಾಲ ಪರಿಸ್ಥಿತಿ ಬಗ್ಗೆ ಸರ್ಕಾರದಿಂದ ಉತ್ತರ ಬಂದಿಲ್ಲ. ಸಿ.ಇ.ಟಿ. ಬಗ್ಗೆ ಈ ಸರ್ಕಾರದ ನಿರ್ಧಾರ ಏನೆಂದು ಉತ್ತರ ಬಂದಿಲ್ಲ. ಪೇರೆಂಟ್ಸ್ ತ್ರಿಶಂಕು ಸ್ಥಿತಿಯಲ್ಲಿ ಇದ್ದಾರೆ. ದಯವಿಟ್ಟು ಕ್ಷಮಿಸಬೇಕು. ಇಲ್ಲಿ ಸಣ್ಣ ಬಿಲ್ಲು, ದೊಡ್ಡ ಬಿಲ್ಲು ಎಂಬ ಪ್ರಶ್ನೆ ಬರುವುದೇ ಇಲ್ಲ. ಕಾನೂನಿನ ದೃಷ್ಟಿಯಿಂದ ಅದು ಒಂದೇ.

ಛೇರ್ಮನ್ : ಇದೊಂದನ್ನು ಮುಗಿಸಿ, ನಂತರ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಾಗಲ್ಲ ಸ್ವಾಮಿ. ಎಲ್ಲವನ್ನೂ ಮಾಡಬೇಕೆಂದು ಹೇಳಿದರೆ, ಬಜೆಟ್ ಬಗ್ಗೆ ಯಾವಾಗ ಚರ್ಚೆ ಮಾಡುವುದು? 28ನೇ ತಾರೀಖು ಮುಖ್ಯಮಂತ್ರಿಗಳು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಮೀನುಗಾರಿಕೆ ವಿಧೇಯಕವೊಂದನ್ನು ಪಾಸ್ ಮಾಡಿಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದನ್ನು ನೀವು ಮುಂಚಿತವಾಗಿ ಮಾಡಿಕೊಳ್ಳಬೇಕಿತ್ತು. ಬಜೆಟ್ ಬಗ್ಗೆ ಸದಸ್ಯರುಗಳು ಯಾವಾಗ ಮಾತನಾಡುವುದು? ಒಂದುಕಡೆ ಇವರೆಲ್ಲಾ ಹೇಳುತ್ತಾರೆ. ಫ್ರಂಟ್ ಬೆಂಚ್ ನಲ್ಲಿರುವವರೇ ಎಲ್ಲಾ ಮಾತನಾಡುತ್ತಾರೆಂದು ಹೇಳುತ್ತಾರೆ. ಜನರು, ನೀವೇನೂ ಬಜೆಟ್ ಬಗ್ಗೆ ಮಾತನಾಡುವುದೇ ಇಲ್ಲವೆಂದು ಹೇಳುತ್ತಾರೆ. ಸರ್ಕಾರದ ಜೊತೆ ಶಾಮೀಲು ಆಗಿದ್ದೀರಿ ಎಂದು ಹೇಳುತ್ತಾರೆ. ಹಾಗಾದರೆ, ನಾವು ಮಾತನಾಡುವುದು ಬೇಡವೇ? ಪ್ರತಿ ದಿನ ಬಿಲ್‌ಗಳನ್ನು ಪಾಸ್ ಮಾಡಿಕೊಂಡು ಕುಳಿತರೆ, ಟೈಮ್ ಎಲ್ಲಿದೆ ಎಂದು ಕೇಳುವುದು. ವ್ಯಾಟ್ ಬಿಲ್ಲನ್ನು ಮಾಡಿಕೊಡಬೇಕೆಂದು ಹೇಳಿದಿರಿ, ಆಫೀಸರುಗಳು ಪ್ರತಿ ದಿನಾ ಬಂದು ಕುಳಿತುಕೊಂಡು ಹೋಗುವುದನ್ನು ನೋಡಿ, ನೋಡಿ ಕರುಣೆಯಿಂದ ಪಾಪ ಅವರಾದರೂ ಹೋಗಲಿ ಎಂದು ಅದನ್ನು ಮಾಡಿಕೊಟ್ಟಿದ್ದೇವೆ. ಜನಗಳ ಪರವಾಗಿ ಮಾಡಿದ್ದೇವೆ. ದಯಮಾಡಿ, ಬಜೆಟ್ ಬಗ್ಗೆ ನಮ್ಮಕಡೆಯವರು ಮಾತನಾಡುತ್ತಾರೆ, ಅವಕಾಶ ಕೊಡಿ. ದಿನವೂ ಇದೇ ವ್ಯವಹಾರ ನಡೆಯುತ್ತಾ ಇದೆಯಲ್ಲ.

ಛೇರ್ಮನ್ : ಇದನ್ನು ಮುಗಿಸಿದ ಕೂಡಲೇ ಬಜೆಟ್ ಚರ್ಚೆಯನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಏನಾದರೂ ವಿಷಯ ಪ್ರಸ್ತಾಪ ಮಾಡಿದಾಗ you cannot brush aside like that.

ಛೇರ್ಮನ್ : ಹಾಗೆ ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೆ ನೀವು ಉತ್ತರ ಕೊಡಿ. ನಾನೇಕೆ ಇಲ್ಲಿ ನಿಂತಿದ್ದೇನೆ.

ಛೇರ್ಮನ್ : ಈ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಂಡ ಮೇಲೆ, ಆಯವ್ಯಯದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಕರ್ನಾಟಕ ಒಳನಾಡು ಮೀನುಗಾರಿಗೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕ 1996

ಪರ್ಯಾಲೋಚನಾ ಪ್ರಸ್ತಾವ

ಶ್ರೀ ವಸಂತ ಎ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, "1996ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಗೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕವನ್ನು ಭಾರತದ ರಾಷ್ಟ್ರಪತಿಯವರಿಂದ ಹಿಂದಿರುಗಿಸಿದ್ದ ಮೇರೆಗೆ ಪುನಃ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ಚರ್ಚೆ ಬೇಕಾಗಿಲ್ಲವೇ? ಅವರೇನೂ ವಿವರಣೆ ಮಾಡುವುದು ಬೇಕಾಗಿಲ್ಲವೇ? ಹಾಗೆಯೇ ಬಿಲ್ಲನ್ನು ಪಾಸ್ ಮಾಡಿಬಿಡುತ್ತೀರಾ?

ಛೇರ್ಮನ್ : ಆಯಿತು. ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ವಸಂತ ಎ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ಬಗ್ಗೆ ವಿವರಣೆ ನೀಡುತ್ತೇನೆ. ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯನ್ನು ರಕ್ಷಿಸುವ ಸಲುವಾಗಿ, ಅದೇರೀತಿಯಲ್ಲಿ ಅಭಿವೃದ್ಧಿಯ ಸಲುವಾಗಿ, ಅದೇರೀತಿಯಲ್ಲಿ ನಿಯಂತ್ರಣ ಮಾಡುವ ರೀತಿಯಲ್ಲಿ ಭಾರತದ ರಾಷ್ಟ್ರಪತಿಯವರು ಹಿಂದಿರುಗಿಸಿರುತ್ತಾರೆ. ಏಕೆಂದರೆ, 1998ರಲ್ಲಿ ಕೆಳ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಈ ಮಸೂದೆ ಪಾಸಾಗಿ, ಮಾನ್ಯ ರಾಷ್ಟ್ರಪತಿಯವರಿಗೆ ಕಳುಹಿಸಲಾಗಿತ್ತು. ಅದನ್ನು ಪುನಃ ಈ ಮನೆಯಲ್ಲಿ ಈಗ ಮಂಡಿಸಲಿರುವ ತಿದ್ದುಪಡಿಗಳ ಅನುಮೋದನೆ ನೀಡಬೇಕೆಂದು ಕೋರುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ರಾಷ್ಟ್ರಪತಿಯವರು ಏಕೆ ಒಪ್ಪಿಕೊಂಡಿಲ್ಲವೆಂಬುದನ್ನು ಸ್ವಲ್ಪ ಹೇಳಲಿ. ಅವರಿಂದ ವಾಪಸ್ ಏಕೆ ಬಂತು ಎಂಬುದನ್ನು ಹೇಳಬೇಕಲ್ಲಾ. ಅಲ್ಲಿಂದ ವಾಪಸ್ ಬರುವುದಕ್ಕೆ ಕಾರಣಗಳೇನು ಎಂಬುದನ್ನು ಹೇಳಲಿ.

ಶ್ರೀ ವಸಂತ ಎ. ಸಾಲಿಯಾನ : ಸದರಿ ವಿಧೇಯಕದಲ್ಲಿ ಒಂದನೇ ಖಂಡದಲ್ಲಿ ಒಂದು ಪದ ಇದೆ. ವನ್ಯಮೃಗ ರಕ್ಷಣೆ ಅಧಿಯಮ 1972ರಲ್ಲಿ, ಅದೇರೀತಿಯಲ್ಲಿ ರಾಷ್ಟ್ರೀಯ ಉದ್ಯಾನವನ ಮತ್ತು ಅಭಿವೃದ್ಧಿಯಲ್ಲಿ ಈ ಪ್ರದೇಶದ ಜಲಪ್ರದೇಶವನ್ನು, ಯಾವುದೇ ಜಲಪ್ರದೇಶದಲ್ಲಿ "ಎನ್ನುವಂಥ ಪದವನ್ನು ಬದಲಾವಣೆ ಮಾಡಿದ್ದಾರೆ. ಅದೇರೀತಿಯಲ್ಲಿ ಕೆರೆಗಳಲ್ಲಿ ಕಳ್ಳತನ ಮಾಡುವಾಗ, ಅದಕ್ಕೆ ಏನು ಶಿಕ್ಷೆ ಕೊಡಬೇಕು, ಅದೇ ರೀತಿಯಲ್ಲಿ ಅದಕ್ಕೇನು ಫೈನ್ ಮಾಡಬೇಕು ಎಂಬ ಈ ಮೂರು ವಿಚಾರಗಳನ್ನು ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿ ಕಳುಹಿಸಬೇಕೆಂದು ಈ ಮಸೂದೆಯನ್ನು ಕಳುಹಿಸಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಇದರಲ್ಲಿ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯ ಇವುಗಳನ್ನೆಲ್ಲಾ ಸೇರಿಸಬೇಕು, ಪನಿಷ್‌ಮೆಂಟಿನ ಬಗ್ಗೆ ಕೂಡ ಸುದೀರ್ಘವಾದ ಚರ್ಚೆಯಾಗಬೇಕು. ಏಕೆ ಪನಿಷ್‌ಮೆಂಟ್ ಅಷ್ಟು ಸೀರಿಯಸ್ಸಾಗಿರಬೇಕು ಎಂಬ ಬಗ್ಗೆ ಚರ್ಚೆಯಾಗುವುದು ಬೇಡವೇ? ಕೇವಲ ಇದನ್ನು ಹಾಗೆಯೇ ಪಾಸ್ ಮಾಡುವುದಕ್ಕೆ ಆಗುವುದಿಲ್ಲ ಅಧ್ಯಕ್ಷರೇ ಒಂದು ಸುವ್ಯಮೋಟೋ ಯಾವುದಾದರೂ ವರ್ಡಿಂಗ್ಸ್ ಸೇರಿಸುವುದು, ಮತ್ತೊಂದು ಮಾಡುವುದಿದ್ದರೆ ಸರಿ.

ಶ್ರೀ ವಸಂತ ಎ. ಸಾಲಿಯಾನ : ಪನಿಷ್ ಮೆಂಟ್ ಮೂರು ವರ್ಷಗಳು ಮತ್ತು ನೂರು ರುಪಾಯಿ ಫೈನ್ ಎಂಬುದಾಗಿ ಇತ್ತು. ಈ ಮೂರು ವರ್ಷ ಇದ್ದುದು ಎರಡು ವರ್ಷವೆಂದೂ,

ಒಂದು ನೂರು ರೂಪಾಯಿಗಳ ಫೈನ್ ಇದ್ದುದ್ದು ಐದು ಸಾವಿರ ರೂಪಾಯಿಗಳು ಎಂದು ಆಯಿತು.

ಶ್ರೀ ಡಿ.ವಿ. ಸದಾನಂದಗೌಡ : ಈ ಬದಲಾವಣೆಗಳ ಅವಶ್ಯಕತೆ ಏನಿತ್ತು?

ಶ್ರೀ ವಸಂತ ವಿ. ಸಾಲಿಯಾನ : ಕೆರೆಗಳಲ್ಲಿ ಮೀನು ಹಿಡಿಯತಕ್ಕ ಸಂದರ್ಭಗಳಲ್ಲಿ ಕಳ್ಳತನ ಆಗುತ್ತದೆ. ಇದಕ್ಕೆ ಮುಂಚೆ ಮೂರು ವರ್ಷಗಳ ಶಿಕ್ಷೆ ಇತ್ತು. ಅದರ ಬದಲಿಗೆ ಎರಡು ವರ್ಷಗಳ ಶಿಕ್ಷೆ ಎಂದು ಮಾಡಲಾಗಿದೆ. ಅದೇರೀತಿಯಲ್ಲಿ ಒಂದು ನೂರು ರೂಪಾಯಿ ಫೈನ್ ಇದ್ದುದ್ದನ್ನು ಐದು ಸಾವಿರ ರೂಪಾಯಿಗಳಿಗೆ ಪರಿವರ್ತನೆ ಮಾಡಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡುವುದಕ್ಕೆ ಕಾರಣ ಏನು?

ಶ್ರೀ ವಸಂತ ವಿ. ಸಾಲಿಯಾನ : ಇದು ತಮ್ಮ ಕಾಲದಲ್ಲಿ ಆಗಿರುವ ವಿಧೇಯಕ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಇದು ಹಿಂದೆ ಪಾಸ್ ಆದ ಬಿಲ್. ಮಾನ್ಯ ರಾಷ್ಟ್ರಪತಿಗಳು ಅದನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್‌ಗೆ ಸರಿಸಮಾನವಾಗಿ, ಇರಲಿ ಎಂದು ಆ ಪ್ರಕಾರವಾಗಿ ತಿದ್ದುಪಡಿಯನ್ನು ಮಾಡಲು ವಾಪಸ್ ಕಳುಹಿಸಿದ್ದಾರೆ. ಅಷ್ಟು ಬಿಟ್ಟರೆ ಬೇರೆ ಏನೂ ಇಲ್ಲ. ಹಗೆಯೇ, ವೈಲ್ಡ್ ಲೈಫ್ ಸಾಂಕ್ಚುರಿಯನ್ನು ಇದಕ್ಕೆ ಹೊರತು ಪಡಿಸಬೇಕೆಂದು ಹೇಳಿದ್ದಾರೆ. ಯಾಕೆಂದರೆ ಅದಕ್ಕೆ ಪ್ರತ್ಯೇಕವಾದ ಆಕ್ಟ್ ಇದೆ. ಅಷ್ಟಕ್ಕೋಸ್ಕರ ಇದು ವಾಪಸ್ ಬಂದಿದೆ.

ಶ್ರೀ ಡಿ.ವಿ. ಸದಾನಂದ ಗೌಡ : ಇದರಲ್ಲಿ ವ್ಯತ್ಯಾಸಗಳು ಆಗಿವೆ, ಅದನ್ನು ತಿದ್ದುಪಡಿ ಮಾಡಬೇಕೆಂದು ಪುನಃ ಇಲ್ಲಿ ಬಂದಿದೆ. ಆದುದರಿಂದ ಇದನ್ನು ಕೂಲಂಕಷವಾಗಿ ಚರ್ಚೆ ಮಾಡದಿದ್ದರೆ, ಪುನಃ ಅಲ್ಲಿಂದ ರಿಜೆಕ್ಟ್ ಆಗಿ ಬರಬಾರದು ಎಂಬ ಉದ್ದೇಶ ನಮ್ಮದು. ಯಾಕೆಂದರೆ ಒಮ್ಮೆ ರಿಜೆಕ್ಟ್ ಆಗಿ ಬಂದುದು ಯಾವುದೋ ಕಾರಣಕ್ಕಾಗಿ ಹೀಗಿರುವಾಗ ಪುನಃ ಇನ್ನೊಮ್ಮೆ ರಿಜೆಕ್ಟ್ ಆಗಿ ಬರಬಾರದಲ್ಲವೇ?

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ರಾಷ್ಟ್ರಪತಿಗಳು, 7.4.2002ನೇ ಇಸವಿಗೆ ಇದನ್ನು ತಿದ್ದುಪಡಿ ಮಾಡಬೇಕೆಂದು ಹೇಳಿದ್ದಾರೆ. ಇವೊತ್ತು ಅದು ಬಂದಿದೆ ಅದಕ್ಕೆ ಅನುಮತಿ ಕೊಡಿ ಎಂಬುದು ನನ್ನ ಮನವಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, 7.4.2002 ರಂದು ರಾಷ್ಟ್ರಪತಿಗಳವರ ಸಹಿ ಆಗಿದೆ. ಆದರೆ ಇಲ್ಲಿ ಸದನದಲ್ಲಿ ಅದನ್ನು ಪುನಃ ತರಲು ಇಷ್ಟು ತಡ ಯಾಕೆ ಆಯಿತು? ಅದನ್ನು ತಿಳಿಸಿ. ಅಲ್ಲಿ ಅವರು ಏನು ತಿದ್ದುಪಡಿಗಳನ್ನು ಮಾಡಲು ಹೇಳಿದ್ದಾರೋ ಅದನ್ನು ನಾವು ಮಾಡಿ ಕಳುಹಿಸೋಣ, ಅದಕ್ಕೆ ಯಾವ ತೊಂದರೆಯೂ ಇಲ್ಲ. ಅದು ಪುನಃ ವಾಪಸ್ ಬರುವ ಪ್ರಶ್ನೆ ಇಲ್ಲ. ಆದರೆ ಇಷ್ಟು ತಡ ಯಾಕೆಂಬುದು ನಮ್ಮ ಪ್ರಶ್ನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ಸರಕರವಿದ್ದಾಗ ಮಾನ್ಯ ಜಯಪ್ರಕಾಶ ಹೆಗಡೆಯವರು ಆಗಿದ್ದಾಗ ಇದು ಆಗಿರುವಂತಾದ್ದು. ಇದು ಸ್ವಾಗತಾರ್ಹ. ಆದರೆ ಪ್ರೆಸಿಡೆಂಟ್ ಅಸ್ಸೆಂಟ್‌ಲ್ಲಿ, ಕೆಲವು ಲೋಪದೋಷಗಳಿವೆ, ಸರಿಪಡಿಸಿ ಎಂದಿದ್ದಾರೆ. ಅದು ಏನು ಎಂಬುದನ್ನು ಮಾನ್ಯ ಸಚಿವರು ಹೇಳಬೇಕು, ಯಾವುದಕ್ಕೆ ನಾವು ತಿದ್ದುಪಡಿ ತರಬೇಕೆಂದು ಬೇಕಲ್ಲಾ?

ಶ್ರೀ ವಸಂತ ಎ. ಸಾಲಿಯಾನ : ಮಾನ್ಯ ಬಚ್ಚೇಗೌಡರವರೆ, ರಾಷ್ಟ್ರಪತಿಯವರು 12.4.02 ಕೆಲವೊಂದು ಬದಲಾವಣೆಗಾಗಿ ಕಳುಹಿಸಿದರು.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನ ಹಳ್ಳಿ : ಮಾನ್ಯ ಅಧ್ಯಕ್ಷರೆ, ಇದು ಕೆರೆ ಮೀನಿನ ವಿಚಾರ. ಅವರು ಕಡಲು ಕಡೆಯವರು. ಅವರಿಗೆ ಕೆರೆಮೀನಿನ ರುಚಿ ಗೊತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಒಂದೇ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಒಳನಾಡು ಮೀನುಗಾರಿಕೆ ಕುರಿತಂತೆ ಏನು ಮೀನು ಸಂರಕ್ಷಣಾ ಅಭಿವೃದ್ಧಿ ಕಾಯಿದೆ ಏನು ಬರುತ್ತಿದೆ, ಇದು 1995 ರಲ್ಲಿ ಇಲ್ಲಿ ಚರ್ಚೆಯಾಗಿ ಹೋಗಿದೆ. ಇದರೊಳಗೆ, ಮದ್ರಾಸ್, ಹೈದ್ರಾಬಾದ್ ಅಧಿನಿಯಮಗಳೆಲ್ಲವನ್ನೂ ಕ್ರೋಢೀಕರಿಸಿ, ನಮ್ಮ ಕರ್ನಾಟಕಕ್ಕೆ ಪ್ರತ್ಯೇಕವಾದ ಕಾಯಿದೆ ಬೇಕೆಂಬ ಬಗ್ಗೆ ಚರ್ಚೆಯಾಗಿದೆ. ನಾನು ಒಂದೇ ಒಂದು ಹೆದರಿಕೆಯನ್ನು ಈ ಸಂದರ್ಭದಲ್ಲಿ ಹೇಳಬಯಸುವುದು, ಮಾನ್ಯ ಸಚಿವರು ತಿದ್ದುಪಡಿಯನ್ನು ತರುವುದಕ್ಕಿಂತ ಮೊದಲು, ಪ್ರಾಸ್ತಾವಿಕವಾಗಿ ಸ್ವಲ್ಪ ಹೇಳಿದ್ದಿದ್ದರೆ, ಬಿಲ್ಲಿನ ಒಳ ಅಂಶಗಳನ್ನು ಸ್ಪಷ್ಟಪಡಿಸಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಬಿಲ್ಲಿನ ಉದ್ದೇಶ ಏನಿತ್ತು ಎಂಬುದನ್ನೂ ಕೂಡ ಹೇಳಲಿಲ್ಲ. ನಾನು ಬಯಸುವುದು ಇಷ್ಟೇ, ಇಲ್ಲಿ ಬಿಲ್‌ನಲ್ಲಿ ಉದ್ದೇಶ ಮತ್ತು ಕಾರಣಗಳು ಇವೆ. ಇಲ್ಲಿ ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೆ ಈ ಅವಧಿಯಲ್ಲಿ ಮೀನು ಹಿಡಿಯುವುದನ್ನು ನಿಷೇಧಿಸುವ ಮೂಲಕ, ಮಾಸಾರ್, ಗೇಮ್ ಫಿಶ್, ಲೈವ್ ಫಿಶ್ ಮುಂತಾದ ಅಪರೂಪದ ಮೀನುಗಳನ್ನು ಸಂರಕ್ಷಿಸಬೇಕೆಂಬುದು ಇದೆ. ನಾನು ಮತ್ತೆ ಮತ್ತೆ ತಮ್ಮಲ್ಲಿ ಕೇಳಿಕೊಳ್ಳುವುದು, ನಾನು ಕೆರೆಯಲ್ಲಿ ಮೀನು ಸಾಕುವಂಥವರ ಜೊತೆಯಲ್ಲಾಗಲಿ, ಬೇರೆ ಬೇರೆ ಮೀನುಗಾರರ ಒಡನಾಟದಲ್ಲಿರುವಂಥವರು. ಅವರು ಸೊಸೈಟಿಗಳನ್ನು ಮಾಡಿಕೊಂಡಿರುವವರು. ಈ ಮೂಲಕ ಬೇರೆ, ಬೇರೆ ಚಟುವಟಿಕೆಗಳನ್ನು ನಡೆಸುತ್ತಾ ಇರುವಂಥವರು. ಇದು ನಮ್ಮ ಕ್ಷೇತ್ರದಲ್ಲಿಯೂ ಇದೆ, ಬಹುತೇಕ ರಾಜ್ಯದ ಎಲ್ಲಾ ಒಳನಾಡಿನಲ್ಲೂ ಇದೆ, ಇದರೊಳಗೆ ಯಾವುದೇ ರೀತಿಯಿಂದ ಹೆರಾಶ್‌ಮೆಂಟ್ ಆಗಬಾರದು.

ಅಧ್ಯಕ್ಷರು : ವಿಶ್ವೇಶ್ವರ ಹೆಗಡೆಯವರೆ, ಈ ವಿಧೇಯಕವು ಸಮಗ್ರವಾಗಿ ಚರ್ಚೆಯಾಗಿ, ಒಂದು ಸಲ ಪಾಸ್ ಆಗಿದೆ. ಈಗ ಅದನ್ನು ರೀ- ಕನ್ಸಿಡರೇಶನ್‌ಗೆ ಇಟ್ಟಿದ್ದಾರೆ. ಪುನಃ ಅದನ್ನು ಚರ್ಚೆ ಮಾಡುವಂಥ ಪ್ರಶ್ನೆ ಏನೂ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕೆಲವು ಎಚ್ಚರಿಕೆಗಳನ್ನು ಸರಕಾರವು ಗಮನಿಸದೆ ಹೋದರೆ, ಮೀನುಗಾರರಿಗೆ ತೊಂದರೆಯಾಗುತ್ತದೆ, ಮುಂದೆ ಅಧಿಕಾರಿಗಳು ಈ ಮೀನು ಏಕೆ ಹಿಡಿದುಕೊಂಡು ಬಂದೆ, ಅದನ್ನು ಏಕೆ ಹಿಡಿದುಕೊಂಡು ಬಂದೆ ಎಂದು ತೊಂದರೆ ಕೊಡಲು ಮುಂದಾದರೆ ಕಷ್ಟವಾಗುತ್ತದೆ.

ಚೇರ್ಮನ್ : ಪ್ರಸ್ತಾವ ಏನೆಂದರೆ, "1996ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 1ಕ್ಕೆ ತಿದ್ದುಪಡಿ:

ಶ್ರೀ ವಸಂತ ವಿ.ಸಾಲಿಯಾನ: (ಮೀನುಗಾರಿಕೆ ಮತ್ತು ಬಂದರು ಸಚಿವರು) ಮಾನ್ಯ ಅಧ್ಯಕ್ಷರೇ, ಖಂಡ 1ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಗಳನ್ನು ಮಂಡಿಸುತ್ತೇನೆ.

ಸದರಿ ವಿಧೇಯಕದಲ್ಲಿ 1ನೇ ಖಂಡದಲ್ಲಿ (3)ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು.

ಎಂದರೆ:

"ಮತ್ತು ಸಮುದ್ರದ ಗಡಿಯ ಹೊರಗಿನ ಪ್ರದೇಶಗಳಲ್ಲಿ" ಎಂಬ ಪದಗಳಿಗೆ "ವನ್ಯಮೃಗ ಸಂರಕ್ಷಣೆ ಅಧಿನಿಯಮ, 1972ರ (1972ರ ಕೇಂದ್ರ ಅಧಿನಿಯಮ 53) ಅಡಿಯಲ್ಲಿ ಘೋಷಿಸಲಾದ ರಾಷ್ಟ್ರೀಯ ಉದ್ಯಾನಗಳು ಮತ್ತು ಅಭಯಾರಣ್ಯಗಳು ಮತ್ತು ಪ್ರಾದೇಶಿಕ ಜಲಪ್ರದೇಶದಿಂದ ಆಚೆಗಿನ ಯಾವುದೇ ಜಲಪ್ರದೇಶದಲ್ಲಿ"

ಪ್ರಸ್ತಾವವನ್ನು ಮಂಡಿಸಲಾಯಿತು

ಚೇರ್ಮನ್ : ಪ್ರಸ್ತಾವ ಏನೆಂದರೆ, "ಸದರಿ ವಿಧೇಯಕದಲ್ಲಿ 1ನೇ ಖಂಡದಲ್ಲಿ (3)ನೇ ಉಪಖಂಡಕ್ಕೆ" ಮುಂದಿನದನ್ನು ಪ್ರತಿಯೋಜಿಸತಕ್ಕದ್ದು.

"ಮತ್ತು ಸಮುದ್ರದ ಗಡಿಯ ಹೊರಗಿನ ಪ್ರದೇಶಗಳಲ್ಲಿ" ಎಂಬ ಪದಗಳಿಗೆ "ವನ್ಯಮೃಗ ಸಂರಕ್ಷಣೆ ಅಧಿನಿಯಮ, 1972 ರ (1972 ರ ಕೇಂದ್ರ ಅಧಿನಿಯಮ 53) ಅಡಿಯಲ್ಲಿ ಘೋಷಿಸಲಾದ ರಾಷ್ಟ್ರೀಯ ಉದ್ಯಾನಗಳು ಮತ್ತು ಅಭಯಾರಣ್ಯಗಳು ಮತ್ತು ಪ್ರಾದೇಶಿಕ ಜಲಪ್ರದೇಶದಿಂದ ಆಚೆಗಿನ ಯಾವುದೇ ಜಲಪ್ರದೇಶದಲ್ಲಿ" ಎಂಬುದನ್ನು ವಿಧೇಯಕಕ್ಕೆ ಸೇರಿಸಿಕೊಳ್ಳುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1ಕ್ಕೆ ತಿದ್ದುಪಡಿಯಾದ ರೀತಿಯಲ್ಲಿ

ಚೇರ್ಮನ್ : ಪ್ರಸ್ತಾವ ಏನೆಂದರೆ, "ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 14 ರವರೆಗೆ

ಖಂಡ 2 ರಿಂದ 14 ಎರಡೂ ಸೇರಿದಂತೆ

ಚೇರ್ಮನ್ : ಪ್ರಸ್ತಾವ ಏನೆಂದರೆ: ಖಂಡ 2 ರಿಂದ 14 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 14 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 15 ಮತ್ತು 16ಗಳಿಗೆ ತಿದ್ದುಪಡಿ:

ಶ್ರೀ ವಸಂತ ಎ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ಸಚಿವರು) : ಮಾನ್ಯ ಅಧ್ಯಕ್ಷರೇ, "ಖಂಡ 15 ಮತ್ತು 16ಗಳಿಗೆ ನಾನು ಈ ಕೆಳಕಂಡ ತಿದ್ದುಪಡಿಗಳನ್ನು ಮಂಡಿಸುತ್ತೇನೆ.

ಖಂಡ 15ಕ್ಕೆ ತಿದ್ದುಪಡಿ:

ಸದರಿ ವಿಧೇಯಕದಲ್ಲಿ 15ನೇ ಖಂಡದಲ್ಲಿ (1)ನೇ ಉಪ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:

"ಒಂದು ನೂರು ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಎರಡು ಸಾವಿರ ರೂಪಾಯಿಗಳವರೆಗೆ" ಹಾಗೂ

ಖಂಡ 16ಕ್ಕೆ ತಿದ್ದುಪಡಿ:

ಸದರಿ ವಿಧೇಯಕದಲ್ಲಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ

"ಮೂರು ವರ್ಷಗಳ" ಮತ್ತು "ಒಂದು ನೂರು ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಎರಡು ವರ್ಷಗಳ" ಮತ್ತು "ಐದು ಸಾವಿರ ರೂಪಾಯಿಗಳವರೆಗೆ" ಎಂಬ ತಿದ್ದುಪಡಿಗಳಿಗೆ ಅನುಮೋದನೆ ನೀಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಖಂಡ 15 ಮತ್ತು 16 ಗಳಿಗೆ ತಿದ್ದುಪಡಿ:

ಚೇರ್ಮನ್ : ಪ್ರಸ್ತಾವ ಏನೆಂದರೆ

ಖಂಡ 15ಕ್ಕೆ ತಿದ್ದುಪಡಿ

ಸದರಿ ವಿಧೇಯಕದಲ್ಲಿ 15ನೇ ಖಂಡದಲ್ಲಿ (1) ನೇ ಉಪ ಖಂಡಕ್ಕೆ

"ಒಂದು ನೂರು ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಎರಡು ಸಾವಿರ ರೂಪಾಯಿಗಳವರೆಗೆ" ಎಂಬ ತಿದ್ದುಪಡಿಯನ್ನು ಅನುಮೋದಿಸುವುದು"

ಖಂಡ 16ಕ್ಕೆ ತಿದ್ದುಪಡಿ

"ಮೂರು ವರ್ಷಗಳ" ಮತ್ತು "ಒಂದು ನೂರು ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಎರಡು ವರ್ಷಗಳ" ಮತ್ತು "ಐದು ಸಾವಿರ ರೂಪಾಯಿಗಳವರೆಗೆ" ಎಂಬ ತಿದ್ದುಪಡಿಯನ್ನು ಅನುಮೋದಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 15 ಮತ್ತು 16 ತಿದ್ದುಪಡಿಯಾದ ರೀತಿಯಲ್ಲಿ

ಚೇರ್ಮನ್ : ಪ್ರಸ್ತಾವ ಏನೆಂದರೆ

"ಖಂಡ 15 ಮತ್ತು 16 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 15 ಮತ್ತು 16 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 17 ರಿಂದ 24 ರವರೆಗೆ

ಚೇರ್ಮನ್ : ಪ್ರಸ್ತಾವ ಏನೆಂದರೆ

"ಖಂಡಗಳು 17 ರಿಂದ 24ರವರೆಗೆ, ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 17 ಮತ್ತು 24 ರವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:

ಚೇರ್ಮನ್ : ಪ್ರಸ್ತಾವ ಏನೆಂದರೆ

"ತಿದ್ದುಪಡಿಯಾದ ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಅನುಮೋದನಾ ಪ್ರಸ್ತಾವ

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ಸಚಿವರು): ಮಾನ್ಯ ಅಧ್ಯಕ್ಷರೇ,

"1996 ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ಸದನವು ಅನುಮೋದಿಸಬೇಕೆಂದು ಕೋರುತ್ತೇನೆ"

ಚೇರ್ಮನ್ : ಪ್ರಸ್ತಾವ ಏನೆಂದರೆ

"1996 ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಈ ಸದನವು ಅನುಮೋದಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕಕ್ಕೆ ತಿದ್ದುಪಡಿಯಾದ ರೀತಿಯಲ್ಲಿ ಒಪ್ಪಿಗೆ ನೀಡಲಾಯಿತು

8. ವಿತ್ತೀಯ ಕಾರ್ಯಕಲಾಪ

2003-04ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ (ಮುಂದುವರಿದುದು)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಆಯವ್ಯಯದ ಮೇಲಿನ ಚರ್ಚೆಯನ್ನು ನಿನ್ನೆ ಆರಂಭ ಮಾಡಿ, ನಾನು ಪ್ರಾಥಮಿಕ ಶಿಕ್ಷಣದಲ್ಲಿ ಮಧ್ಯಾಹ್ನದ ಊಟದ ಬಗ್ಗೆ, ಪ್ರಸ್ತಾಪ ಮಾಡಿದ್ದೆ. ಬಿಸಿಯೂಟಕ್ಕೆ ಈಗಾಗಲೇ ಕೇಂದ್ರ ಸರಕಾರ ಅಕ್ಕಿ ಮತ್ತು ಗೋಧಿ ಮುಂತಾಗಿ ಮುಖ್ಯವಾದ ಧಾನ್ಯಗಳನ್ನು ಒದಗಿಸುವುದಕ್ಕೆ, ಬದ್ಧ ಇದೆ. ಈಗಾಗಲೇ ಅದನ್ನು ಕೊಡುತ್ತಾ ಇದ್ದಾರೆ. ನಮ್ಮ ರಾಜ್ಯ ಸರಕಾರದವರು ಮಿಸಲೇನಿಯಸ್ ಆಗಿ ಒಬ್ಬ ವಿದ್ಯಾರ್ಥಿಗೆ ಒಂದು ರೂಪಾಯಿ ಲೆಕ್ಕದಲ್ಲಿ ಕೊಡುವಂಥಾದ್ದು ಅವರ ಇನ್‌ವಾಲ್ವ್‌ಮೆಂಟ್ ಆಗಿದೆ. ಅದಕ್ಕೆ ದುಡ್ಡು ಕೊರತೆಯಾಗಿ ಆನ್‌ಲೈನ್ ಲಾಟರಿಯಲ್ಲಿ ಬಂದಂಥದ್ದನ್ನು ನಾವು ಬಿಸಿಯೂಟಕ್ಕೆ ಉಪಯೋಗಿಸುತ್ತೇವೆ ಎಂದು ಹೇಳತಕ್ಕಂಥಾದ್ದು ಆ ಮಕ್ಕಳಿಗೆ ಮಾಡಿರತಕ್ಕಂಥ ಅಪಮಾನ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶಃ ಆಯವ್ಯಯದಂಥ ಒಂದು ಸದುದ್ದೇಶದಿಂದ ಮಂಡಿಸಿರತಕ್ಕಂಥ ಈ ಒಂದು ಪ್ರಸ್ತಾವನೆಯಲ್ಲಿ....

ನಮ್ಮ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಬಗ್ಗೆ ಇಂತಹ ಒಂದು ಅವಮಾನಕಾರಿಯಾಗಿರುವಂತಹ ಸಂಗತಿಯನ್ನು ಮಂಡಿಸಬಾರದಾಗಿತ್ತು ಎನ್ನುವಂಥದ್ದು ನನ್ನ ಇರಾದೆ ಇದೆ. ಈಗಾಗಲೇ ನಮ್ಮ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಒಂದು ಪ್ರಸ್ತಾಪ ಏನೆಂದರೆ ಉತ್ತರಕರ್ನಾಟಕದಲ್ಲಿ ಆಯುಕ್ತರ ಕಚೇರಿಯನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಆಯುಕ್ತರ ಕಚೇರಿಯನ್ನು ಧಾರವಾಡದಲ್ಲೋ ಹುಬ್ಬಳ್ಳಿಯಲ್ಲೋ ತೆರೆಯುತ್ತೇವೆಂದು ಹೇಳಿದ್ದಾರೆ. ಹೀಗೆ ನಮ್ಮ ರಾಜ್ಯದಲ್ಲಿ ಇನ್ನೊಂದಷ್ಟು ಕಚೇರಿಗಳನ್ನು ವ್ಯಾಪಕವಾಗಿ ತೆರೆಯುವುದರಿಂದ ಆಯುಕ್ತರಂತಹ ಒಂದು ಹುದ್ದೆಯನ್ನು ಜಾಸ್ತಿ ಮಾಡುವುದರಿಂದ ಆ ಭಾಗಕ್ಕೇನು ನ್ಯಾಯ ದೊರಕಿಸುತ್ತೇವೆ ಅಂತ ಹೇಳಲಿಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ಕಚೇರಿಯನ್ನು ಆಯುಕ್ತರನ್ನು ಅಥವಾ ಸಿಬ್ಬಂದಿಯನ್ನು ಜಾಸ್ತಿ ಮಾಡಬಹುದೇ ವಿನಾಃ ಆ ಭಾಗಕ್ಕೆ ಒಂದು ಒಳ್ಳೆಯ ಅವಕಾಶವನ್ನು ಒದಗಿಸಲಿಕ್ಕೆ ಸಾಧ್ಯವಿಲ್ಲ. ಅದು ಏನು ಶೈಕ್ಷಣಿಕವಾಗಿ ಹಿಂದುಳಿದಿದೆ ಆ ಭಾಗಕ್ಕೆ ಬೇಕಾಗಿರುವಂತಹದು ಇವತ್ತು ಆ ಭಾಗದ ಅನೇಕ ಶಾಸಕರು ಹೇಳುತ್ತಾ ಇರುತ್ತಾರೆ ಮತ್ತು ನಾವು ಅಲ್ಲಿ ಟೂರ್ ಮಾಡಿದಾಗ ನೊಡಿರುವಂಥದ್ದು ಅಂದರೆ ಶಾಲಾ ಕೊಠಡಿಗಳಿಲ್ಲ, ಇದ್ದರೂ ಕೂಡ ಅಲ್ಲಿ ಪಾಠೋಪಕರಣಗಳು ಪೀಠೋಪಕರಣಗಳು ಇವತ್ತು ಇಲ್ಲ. ಅವುಗಳನ್ನು ಒದಗಿಸಿಕೊಡಿ ಅಂತ ಕೇಳುತ್ತಿದ್ದರೆ ವಿನಹ ಅವರು ಕೇಳಿದ್ದನ್ನು ಬಿಟ್ಟು ಮತ್ತೆಲ್ಲವನ್ನೂ ಸರ್ಕಾರ ಇವತ್ತು ಹೇಳುತ್ತಾ ಇದೆ. ಆಯುಕ್ತರ ಕಚೇರಿಯನ್ನು ಒದಗಿಸುವುದರಿಂದ ಏನೋ ಮಹಾ ಆಗುತ್ತದೆ ಎಂಬುದು ಏನೂ ಇಲ್ಲ ಅಧ್ಯಕ್ಷರೇ, ಹಾಗಾಗಿ ಇರುವಂತಹ DDPI ಕಚೇರಿ Joint Director ಕಚೇರಿಗಳ ಮೂಲಕ ಅಲ್ಲಿನ ಆಡಳಿತವನ್ನು ನಡೆಸಲಿಕ್ಕೆ ಸಾಧ್ಯವಾಗುತ್ತದೆ. ಹಾಗಾಗಿ ಏನೋ ಮಹಾ ಕೊಟ್ಟಿದ್ದೇವೆ ಎಂದು ನಮ್ಮ ಸರ್ಕಾರ ಹೇಳಬಹುದೇ ವಿನಾಃ ಇದರಿಂದಾಗಿ ಅವರಿಗೆ ಅನುಕೂಲವಾಗುತ್ತದೆ ಎನ್ನುವುದಕ್ಕಿಂತ ಸರ್ಕಾರದ ಅಧಿಕಾರಿಗಳು ಸಿಬ್ಬಂದಿಯನ್ನು ಜಾಸ್ತಿ ಮಾಡಿದಹಾಗಾಗುತ್ತದೆ ಅದಕ್ಕೊಂದಷ್ಟು ಹಣದ ಹೊರೆ ಹೊರಿಸದ ಹಾಗೆ ಆಗುತ್ತದೆ. ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಳೆದ ಸಲದ ಬಜೆಟ್‌ನಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ನಿಗದಿ ಮಾಡಿರುವುದಕ್ಕಿಂತ ಸುಮಾರು 133 ಕೋಟಿ ರೂ.ಗಳನ್ನು ಕಡಿಮೆ ಕೊಟ್ಟಿದ್ದಾರೆ. ನಾನು ನಿನ್ನೆ ಅನೇಕ ವಿಚಾರಗಳನ್ನು ಹೇಳಿದೆ. ಈ ಸರ್ಕಾರ ಹೇಳುವ ಸರ್ಕಾರವೇ ಹೊರತು ಮಾಡುವ ಸರ್ಕಾರವಲ್ಲ ಅಂತ. ಅನೇಕ ವಿಚಾರಗಳು ಹಾಗೇ ಆಗುತ್ತವೆ. ಇವತ್ತು ಉನ್ನತ ಶಿಕ್ಷಣ, CET ಗೊಂದಲ ಇದೆ, ಹಾಗೇನೇ ಅನುದಾನವನ್ನು ಕಡಿತ ಮಾಡುತ್ತೇವೆ ಅಂತ ಹೇಳಿ ಈಗಾಗಲೇ ಹೇಳಿಕೆಗಳನ್ನು ನಮ್ಮ ಉನ್ನತ ಶಿಕ್ಷಣ ಸಚಿವರು ಹೇಳಿದ್ದಾರೆ. ಅನುದಾನಿತ ಸಂಸ್ಥೆಗಳಿಗೆ ಇನ್ನು ಮೇಲೆ ಅನುದಾನ ಕೊಡುವುದಿಲ್ಲ ಎಂದು. ಇದರಿಂದಾಗಿ ಬಹಳ ಶಿಕ್ಷಣ ಸಂಸ್ಥೆಗಳು ಈಗಾಗಲೇ ಚಡಪಡಿಸುತ್ತಾ ಇವೆ. ಏನೋ ಒಂದು ಅನಾಹುತ ಆಗಿಹೋಗುತ್ತದೆ ಅಂತ. ಎಲ್ಲಕ್ಕಿಂತ ಹೆಚ್ಚಾಗಿ ಅಧ್ಯಕ್ಷರೇ,ಈ ಈ ರೀತಿಯ ಹೇಳಿಕೆಗಳಿಂದ ಅಲ್ಲಿರುವ ಬಡವರ ಮಕ್ಕಳಿಗೇನು ಉನ್ನತ ವ್ಯಾಸಂಗ ಸಿಕ್ಕಬೇಕಾಗಿತ್ತು ಕನಿಷ್ಟ ಒಂದು ಪದವಿ ತರಗತಿವರೆಗೂ ಓದುತ್ತೇವೆ ಎಂಬ ಆಕಾಂಕ್ಷೆ ಹೊತ್ತು ಬಡವರ ಮಕ್ಕಳು ಕೂಲಿಗಾರರ ಮಕ್ಕಳು ಕೂಡ. ವಂಚಿತರಾಗುತ್ತಾರೆ. ಒಂದು ಕಾಲದಲ್ಲಿ ಈ ಪದವಿ ಕಾಲೇಜುಗಳಿದ್ದುದು ಬಹಳ ಶ್ರೀಮಂತರಿಗೆ ಮಾತ್ರ ಇದ್ದವು. ಕೂಲಿಕಾರರ ಮಕ್ಕಳು ನಮ್ಮ ಸಾಹುಕಾರರ ಮಗ ಇಂತಹದು ಓದುತ್ತಿದ್ದಾನೆ ಅಂತ ಹೇಳಿ ಸಂತೋಷಪಟ್ಟುಕೊಂಡು ಮಣ್ಣುಹೆಡಿಗೆ ಹೊರುತ್ತಾ ಇದ್ದರು. ಹಳ್ಳಿಗಳಲ್ಲಿ, ಆದರೆ ಇವತ್ತು ಆ ಕೂಲಿಕಾರ ಕೂಡ ತನ್ನ ಮಗಳನ್ನು ಓದಿಸಬೇಕು ತಾನು graduation

ಮಾಡಿಸಬೇಕು ಎಂಬ ಹಂತದಲ್ಲಿ ಆ ಶಿಕ್ಷಣ ಸಂಸ್ಥೆಗಳಿಗೆ ಅನುದಾನವನ್ನು ಕಡಿತ ಮಡುತ್ತೇನೆ ಎನ್ನುವಂತಹ ಸರ್ಕಾರದ ಇಂತಹ ಹೇಳಿಕೆಗಳಿಂದಾಗಿ ಇವತ್ತು ನಮಗೆ ಒಳ್ಳೆಯದಾಗುತ್ತದೆ ಎಂಬುದೇನೂ ಇಲ್ಲ. ಇವತ್ತಿನ ಸಾಮಾಜಿಕ ನ್ಯಾಯದ ದೃಷ್ಟಿಯಿಂದಲೂ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಇವರು ಕಳೆದ ಸಲ ಹೇಳಿದ್ದರು; ಹೊಸ ಕಟ್ಟಡಗಳಿಲ್ಲ ಯಾವ ಸರ್ಕಾರಿ ಕಾಲೇಜುಗಳಿಗಿಲ್ಲ ಅದಕ್ಕೆ ಬೇರೆಬೇರೆ ಸಂಘಸಂಸ್ಥೆಗಳಿಂದ ಆರ್ಥಿಕ ಸಂಸ್ಥೆಗಳಿಂದ ಹಣಕಾಸಿನ ನೆರವನ್ನು ಪಡೆದು ನಾವು ಆ ಕಟ್ಟಡಗಳನ್ನೆಲ್ಲಾ ಪೂರ್ಣ ಮಾಡುತ್ತೇವೆ ಅಂತ. ಆದರೆ ಈ ಸಾರಿ ನಿನ್ನೆ ನಾನು ಇವರು ಏನೇನು ಹೇಳಿದ್ದಾರೆ ಏನೇನು ಅನುಷ್ಠಾನ ಮಾಡಿದ್ದಾರೆ ಅಂತ ಕಣ್ಣಾಡಿಸುತ್ತಿದ್ದೆ ಅಧ್ಯಕ್ಷರೇ. ನಮ್ಮ ಸರ್ಕಾರದ Action taken report ನ್ನು ನೋಡುತ್ತಾ ಇದ್ದೆ. ಬಹಳ ಆಶ್ಚರ್ಯಕರವಾದ ಅನೇಕ ಸಂಗತಿಗಳು ಅದರಲ್ಲಿ ಬಂದಿವೆ. ಹೋದ ಸಾರಿ ಬಜೆಟ್‌ನಲ್ಲಿ ಹೇಳುತ್ತಾರೆ, ಒಂದು ವರ್ಷದ ನಂತರ ಒಬ್ಬ consultant ನ್ನು ನೇಮಕ ಮಾಡಿದ್ದೇವೆ, ಬಜೆಟ್‌ನಲ್ಲಿ ಘೋಷಣೆ ಮಾಡಿದ ಒಂದು ವರ್ಷದ ನಂತರ ಏನಾಗಿದೆ ಏಂದು ಕೇಳಿದರೆ ಒಬ್ಬ consultantನ್ನು ಇವರು ನೇಮಕ ಮಾಡಿದ್ದಾರಂತೆ, ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆಯುವುದಕ್ಕೆ ಮತ್ತು ಕಾಲೇಜು ಕಟ್ಟಡ ಕಟ್ಟಲಿಕ್ಕೆ consultantಗೆ ಒಂದಷ್ಟು ದುಡ್ಡು ಕೊಟ್ಟು ನೇಮಕ ಮಾಡಿರುವಂತಹದು ಇವರ ಸಾಧನೆ ಒಂದು ವರ್ಷದ ನಂತರ, ಅಧ್ಯಕ್ಷರೇ ಅನೇಕ ವಿಚಾರಗಳಿವೆ, ಯಾಕೆ ಹೇಳುತ್ತಾ ಇದ್ದೇನೆ ಅಂದರೆ ನಾನು ನಿನ್ನೆ ಹೇಳಿದೆ, ಬಜೆಟ್‌ನಲ್ಲಿ ಅನವಶ್ಯಕ ಘೋಷಣೆಗಳು, ಬಜೆಟಿನ ಒಂದು ಕುತೂಹಲ ಏನಿದೆ ಜನರಿಗೆ, ಈ ಬಜೆಟ್ ಬರುವಂತಹದನ್ನು ನಿರೀಕ್ಷೆ ಮಾಡುತ್ತಾ ಇದ್ದರು ಹಿಂದೆಯೆಲ್ಲಾ. ಒಂದು ಬದಲಾವಣೆಯನ್ನು ಬಯಸುತ್ತಾ ಇದ್ದರು. ಏನೋ ಒಂದು ಆಗುತ್ತದೆ ಬದಲಾವಣೆಗೋಸ್ಕರ ಅಭಿವೃದ್ಧಿಗೋಸ್ಕರ ಈ ಬಜೆಟ್ ಬರುತ್ತದೆ ಅಂತ. ಆದರೆ ಇದುವರೆಗೂ ಮಾಡಿರುವ ಬಜೆಟ್‌ಗಳಲ್ಲಿ ವಿಶೇಷವಾಗಿ 2002-03 ರಲ್ಲಿ ಘೋಷಣೆ ಮಾಡಿದರು ಇವರು; ವನವಿಕಾಸ ಯೋಜನೆ ಅಂತ ಒಂದು ಯೋಜನೆಯನ್ನು ಘೋಷಣೆ ಮಾಡಿದರು. ನಮ್ಮ ಆದಿಚುಂಚನಗಿರಿ ಸ್ವಾಮೀಜಿಯವರ ಟ್ರಸ್ಟನ್ನು ಕೂಡ ಹೊಂದಾಣಿಕೆ ಮಾಡಿಕೊಂಡು ನಾವು ಐದಾರು ಕೋಟಿ ರೂಗಳನ್ನು ವಿನಿಯೋಗ ಮಾಡಿ ಈ ರಾಜ್ಯದಲ್ಲಿ ಸಸಿಗಳನ್ನು ನೆಡಿಸುತ್ತೇವೆ, ಬೇರೆ ಬೇರೆ ಸರ್ಕಾರಿ ಕಚೇರಿಗಳಲ್ಲಾಗಲೀ ಸಾರ್ವಜನಿಕರ ಒಂದು ಸಹಯೋಗದೊಂದಿಗೆ ಸಸಿಗಳನ್ನು ನೆಡಿಸುವಂತಹ ಒಂದು ವ್ಯವಸ್ಥೆ ಮಾಡುತ್ತೇವೆ ಅಂತ ಹೇಳಿದರು. ಈಗ ಅದರ ಫಲಿತಾಂಶವನ್ನು ನೋಡಿದರೆ ಆ ಸಸಿ ಬೆಳೆಸಿರುವವರಿಗೆ ಹಣ ಕೊಡಲಿಲ್ಲ. ಆ ಸಸಿಗಳನ್ನು ಬೆಳೆಸಿರುವ ಅನೇಕ ಕೂಲಿಕಾರರಿಗೆ ಏಳು ತಿಂಗಳಿಂದ ಸಂಬಳ ಕೊಡಲಿಲ್ಲ ಅಧ್ಯಕ್ಷರೇ, ಇವರು ಹೇಳುತ್ತಾರೆ, 3 ಕೋಟಿ ರೂಗಳನ್ನು ಅದಕ್ಕೆ ಇಟ್ಟುಕೊಂಡಿದ್ದೇವೆ ಅಂತ. ಮೂರು ಕೋಟಿ ರೂಯಲ್ಲಿ ಇವತ್ತಿಗೆ ಮೂರು ಕಾಸನ್ನೂ ರಿಲೀಸ್ ಮಾಡಲಿಲ್ಲ. ಇದರ ಪರಿಣಾಮ 7 ತಿಂಗಳಿಂದ ಸಂಬಳ ಕೊಡದೇನೇ ಸಾರಿಗೆ ಕೊಡದೇನೆ ಅಲ್ಲಿ ಯಾರು ಅಡ್ವಾನ್ಸಾಗಿ ಖರ್ಚು ಮಾಡಿದ್ದಾರೆ RFO ಗಳಿಗೆ ಹಣ ಕೊಡದೇನೇ ವನವಿಕಾಸ ಯೋಜನೆ ಒಣವಿಕಾಸ ಯೋಜನೆಯಾಗಿದೆ. ನಿಜವಾಗಿಯೂ ವನವಿಕಾಸ ಯೋಜನೆ ಆಗಲಿಲ್ಲ. ಇನ್ನೊಂದು Kannada culture ಇಲಾಖೆ. ನಮ್ಮ ಕನ್ನಡ ಸಂಸ್ಕೃತಿ ಇಲಾಖೆ ಬಗ್ಗೆ ಒಂದು ಹೇಳಿದರು. ಪರಂಪರೆ ಅಂತ ಒಂದು ಹೊಸ ಯೋಜನೆ ಮಾಡುತ್ತೇವೆ ಅಂತ ಹೇಳಿದರು. ಒಂದು ವರ್ಷದ ನಂತರ ಇದಕ್ಕಾಗಿ ಯಾವ ಹಣವೂ ಕೂಡ ಬಿಡುಗಡೆಯಾಗಲಿಲ್ಲ. ಮತ್ತೆ ಏನು ಮಾಡಿದ್ದೇವೆ ಅಂದರೆ ಈ action taken

report ನಲ್ಲಾಗಲೀ ಇನ್ನೆಲ್ಲೇ ಆಗಲೀ ಏನೂ ಕಾಣುವುದಿಲ್ಲ. 4 ಕೋಟಿ ರೂಗಳನ್ನು ಈ ಪರಂಪರೆ ಎಂದು ಹೊಸ ಹೆಸರನ್ನು ಕೊಟ್ಟಿದ್ದರು ಅದಕ್ಕೆ ವಿನಿಯೋಗ ಮಾಡುತ್ತೇವೆ ಎಂದು. ಒಂದು ಪೈಸೆಯನ್ನೂ ಕೂಡ ಬಿಡುಗಡೆ ಮಾಡದೆ ಅದು ನಿಷ್ಪರಂಪರೆಯಾಗಿ ಹೋಗಿಬಿಟ್ಟಿದೆ ನಮ್ಮ ಸರ್ಕಾರದ ಯೋಜನೆಗಳಲ್ಲಿ. ನಮ್ಮ ವಕ್ಫ್ ಬೋರ್ಡಿಗೆ ಅಧ್ಯಕ್ಷರೇ 2002 03ರಲ್ಲಿ 12 ಕೋಟಿ. ರೂಗಳನ್ನು ಇಟ್ಟುಬಿಟ್ಟು ಅಲ್ಪಸಂಖ್ಯಾತರಿಗೆ ಇಂತಹ ಒಂದು ಒಳ್ಳೆಯದನ್ನು ಮಾಡುತ್ತೇವೆ ಅಂತ ಹೇಳಿದ್ದರು. ವಕ್ಫ್ ಸಚಿವರಿದ್ದಾರೆ. ನಮಗೆ ಹೇಳಬೇಕು. ಅವರು ಈಗ ಅಲ್ಪಸಂಖ್ಯಾತರನ್ನೆಲ್ಲಾ vote bank ಮಾಡಿಕೊಂಡು ಬಿಟ್ಟಿದ್ದಾರೆ. ನಮ್ಮ ಪ್ರಾಥಮಿಕ ಶಿಕ್ಷಣ ಸಚಿವರು ಹೇಳುತ್ತಾ ಇದ್ದರು; ಒಂದು ಉರ್ದು ಅಕಾಡೆಮಿಯನ್ನು ತೆರೆಯುತ್ತೇವೆ ಅಂತ. ಬಹಳ ಚೆನ್ನಾಗಿ ಹೇಳಿದರು. ಪಾಟೀಲ ಪುಟ್ಟಪ್ಪನವರು, ಇಲ್ಲಿ ಉರ್ದು ಮಾತನಾಡುವ ಯಾರು ಮುಸಲ್ಮಾನ ಅಲ್ಪಸಂಖ್ಯಾತ ಬಂಧುಗಳಿದ್ದಾರೆ ಅವರು ಕನ್ನಡದ ಮಣ್ಣಿನ ಮಕ್ಕಳು ಇದ್ದಾರೆ, ಅವರಿಗೆ ಪ್ರತ್ಯೇಕವಾದ ಅಕಾಡೆಮಿ ಅವಶ್ಯಕತೆ ಇಲ್ಲ. ಕನ್ನಡವನ್ನು ಮಾತನಾಡುತ್ತಾರೆ ಅವರೆಲ್ಲಾ ನಿವೇನು ಹೇಳಿದ್ದೀರಿ ಅದಕ್ಕೆ ಬಹಳ ಚೆನ್ನಾಗಿ ಅವರು ಉತ್ತರ ಕೊಡುವಂತಹ ವ್ಯವಸ್ಥೆಯನ್ನು ಮಾಡಿದರು. ಇವತ್ತು ಹೇಳುತ್ತೀರಿ, 12 ಕೋಟಿ ರೂಗಳನ್ನು ನಾವು ವಿನಿಯೋಗ ಮಾಡಿ ಅಲ್ಪಸಂಖ್ಯಾತರ ಆನೇಕ ಸಂಸ್ಥೆಗಳಿಗೆ ಒಳ್ಳೆಯದನ್ನು ಮಾಡುತ್ತೇವೆ ಅವರಿಗೆ ಅನೇಕ ಕಲ್ಯಾಣಕಾರಿ ಕಾರ್ಯಕ್ರಮಗಳನ್ನು ಮಾಡುತ್ತೇವೆ ಅಂತ. ನಾನು action taken report ನಲ್ಲಿ ನೋಡುತ್ತಾ ಇದ್ದೆ ಅಧ್ಯಕ್ಷರೇ, ಹೋದ ಸಾರಿ ಬಜೆಟ್‌ನಲ್ಲಿ 12 ಕೋಟಿ ರೂ. ಪ್ರಸ್ತಾಪ ಮಾಡಿದ್ದಿರಿ, ಘೋಷಣೆ ಮಾಡಿದ್ದು 12 ಕೋಟಿ ರೂ. ಆಮೇಲೆ ನಿಗದಿಪಡಿಸಿದ್ದು 5 ಕೋಟಿ ರೂ. ಹೇಗಿದೆ ನೋಡಿ ಇದು, ಆದರೆ ಬಿಡುಗಡೆ ಮಡಿರುವುದು ಮಾತ್ರ 2 ಕೋಟಿ ರೂ. ಇದು ಅಲ್ಪಸಂಖ್ಯಾತರ ಕಲ್ಯಾಣದ ಒಂದು ಸ್ಯಾಂಪಲ್ ಅಷ್ಟೇ. ಸರ್ಕಾರದ್ದು ತಾವು ಹಿಂದಿನ ಬಜೆಟ್ ನಲ್ಲಿ ಸಾಕಷ್ಟು ಉಲ್ಲೇಖ ಮಾಡಿದ್ದೀರಿ, ತೆರಿಗೆ ಸುಧಾರಣಾ ಆಯೋಗದ ವರದಿಯನ್ನು ಉಲ್ಲೇಖಿಸಿ ನೋಂದಣಿ ಕಚೇರಿಗಳನ್ನು ಬಹಳ ಗಟ್ಟಿಮುಟ್ಟು ಮಾಡುತ್ತೇವೆ, ಅಲ್ಲಿಗೆ ಸಿಬ್ಬಂದಿಯನ್ನು ಸಾಕಷ್ಟು ನೇಮಕ ಮಾಡುತ್ತೇವೆ, ಆಂತರಿಕವಾಗಿರುವ ಆಡಿಟನ್ನು ಮಾಡುತ್ತೇವೆ, ಆಧುನಿಕ ಉಪಕರಣಗಳಿಂದಾಗಿ ಅಲ್ಲಿ ಸುಸಜ್ಜಿತ ನೋಂದಣಿ ಕಚೇರಿಗಳನ್ನು ಮಾಡುತ್ತೇವೆ, sub registrar ಕಚೇರಿಗಳನ್ನು ಮಾಡುತ್ತೇವೆ ಅಂತ. ಈಗ ನಿಮ್ಮ action taken report, ಬಗ್ಗೆ ನಾನು ಬೇರೆ ಏನೂ ಮಾತನಾಡುವುದಿಲ್ಲ, ಯಾಕೆಂದರೆ ಒಂದೊಂದು ವರ್ಷದ ಬಜೆಟ್ ನಲ್ಲೂ ಏನಾಗುತ್ತದೆ ಎನ್ನುವುದಕ್ಕೆ ಯಾವ ಹಾದಿ ಹಿಡಿಯುತ್ತವೆ ಎನ್ನುವುದಕ್ಕೆ ಇಂತಹವೆಲ್ಲಾ ಜ್ವಲಂತ ಉದಾಹರಣೆಗಳು ನಮಗೆ, ಇದರಲ್ಲೇ ಇದೆ, ನಾನೇನು ಬೇರೆ ಹೇಳುತ್ತಾ ಇಲ್ಲ, ಇವರು ಕೊಟ್ಟಿರುವ action taken report ಸಲ್ಲಿ ದಯವಿಟ್ಟು ತಾವು ನೋಡಬೇಕಾಗುತ್ತದೆ, ಇವತ್ತು ಏನೂ ಇಲ್ಲ ಸರ್ ವರದಿ ತರಿಸಿಕೊಂಡಿದ್ದೇವೆ, ಒಂದು ದಮ್ಮಡಿ ಅದಕ್ಕೆ ಬಿಡುಗಡೆ ಮಾಡಲಿಲ್ಲ, ವರದಿ ತರಿಸಿಕೊಂಡಿದ್ದೇವೆ, ಆದರೆ ಆ ವರದಿ ಸಾಕಾಗಲಿಲ್ಲವಂತೆ. ಆದ್ದರಿಂದ ಇನ್ನೊಂದು ವರದಿಯನ್ನು ತರಿಸಿಕೊಳ್ಳುವ ಸನ್ನಾಹದಲ್ಲಿದ್ದೇವೆ. ಇದರಲ್ಲಿ ಬರೆದಿದೆ. ಒಂದು ವರ್ಷದ ನಂತರ ಇಂತಹ ಭರವಸೆಗಳು ಎಷ್ಟು ಪೊಳ್ಳಾಗಿದ್ದಾವೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಅಧ್ಯಕ್ಷರೇ ಹೋದ ಸಲ ಹೇಳಿದರು, ಗ್ರಾಮದ ಕೆರೆಗಳನ್ನು ಗ್ರಾಮಪಂಚಾಯ್ತಿಗಳಿಗೆ ಕೊಟ್ಟು ಉತ್ಪನ್ನವನ್ನು ಬಳಸಿಕೊಂಡು ಸಂಪನ್ಮೂಲವನ್ನು ಹೆಚ್ಚಿಸಲು ಅನುವು ಮಾಡಿಕೊಡಲು